16. ನಗರ ಮತ್ತು ಟೌನುಗಳಲ್ಲಿ ರಾತ್ರಿ ಮತ್ತು ಹಗಲು ಹೊತ್ತಿನ ಪ್ರತಿಕೂಲದ ಸಮಯದಲ್ಲಿ ತಂಗುವ ಜನರನ್ನು ತಪಾಸಣೆ ಮಾಡುವುದು.

17. ಡಕಾಯಿತಿ ನಡೆದ ರಸ್ತೆಗಳಲ್ಲಿ ರಾತ್ರಿ ಗಸ್ತನ್ನು ಏರ್ಪಡಿಸಿ ಡಕಾಯಿತಿಗಳನ್ನು ನಿಯಂತ್ರಿಸಲಾಗಿದೆ.

18. ಡಕಾಯಿತಿಗೊಳಗಾದ ಪ್ರದೇಶಗಳಿಗೆ ಹೋಗುವ ಬಸ್ಸುಗಳಲ್ಲಿ ಲೋಹ ಪರಿಶೋಧಗಳನ್ನು ಅಳವಡಿಸುವುದು.

19. ದಕಾಯಿತಿ ತಂಡವು ಅಡಗಿಕೊಂಡ ಸ್ಥಳಗಳಿಗೆ ಸುಸಜ್ಜಿತವಾದ ಪಡೆಯನ್ನು ಕಳುಹಿಸುವುದು.

20. ಡಕಾಯಿತರ ಹಾವಳಿಗೊಳಪಟ್ಟ ಪ್ರದೇಶ ಹಾಗೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿಸ್ತಂತು ಉಪಕರಣಗಳೊಂದಿಗೆ ತಾತ್ಕಾಲಿಕ ಹೊರ ಠಾಣೆಗಳನ್ನು ಸ್ಥಾಪಿಸುವುದು.

21. ಡಕಾಯಿತಿ ನಿರೋಧಕ ದಳಗಳಿಗೆ ಹೆಚ್ಚಿನ ವಾಹನ ವೈರಲೇಸ್ ಉಪಕರಣಗಳನ್ನು ನೀಡಲಾಗಿದ್ದು, ಈ ದಳಗಳು ಡಕಾಯಿತಿ ತಡೆಯಲು ಹಾಗೂ ಹತ್ತಿಕ್ಕಲು ಪರಿಣಾಮಕಾರಿಯಾಗಿ ಶ್ರಮಿಸುತ್ತಿವೆ.

ಹೊರದೇಶಕ್ಕೆ ಪ್ರವಾಸ ಕೈಗೊಂಡ ಐ.ಎ.ಎಸ್, ಐ.ಪಿ.ಎಸ್. ಅಧಿಕಾರಿಗಳ ಕುರಿತು.

2208 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನವರಿ 1995ದೀಚೆಗೆ ಹೊರದೇಶಕ್ಕೆ ಪ್ರವಾಸ ಕೈಗೊಂಡ ಐಎಎಸ್: ಐಪಿಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು (ಹೆಸರು ಮತ್ತು ಭೇಟಿ ನೀಡಿದ ದೇಶಗಳನ್ನು ನೀಡುವುದು).

ಆ) ಇವರಲ್ಲಿ ರಾಜ್ಯ:ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆಯದೇ ಹೋಗಿರುವ ಅಧಿಕಾರಿಗಳೆಷ್ಟು;

ಇ) ಈ ಪ್ರವಾಸಗಳಿಗೆ ರಾಜ್ಯಸರ್ಕಾರ ಎಷ್ಟು ಹಣವನ್ನು ವೆಚ್ಚಮಾಡಿದೆ.

ಈ) ಹಿಂದಿರುಗಿದ ನಂತರ ಈ ಅಧಿಕಾರಿಗಳೆಲ್ಲರೂ ವರದಿಗಳನ್ನು ನೀಡಿದ್ದಾರೆಯೇ;

ಉ) ಇಲ್ಲದಿದ್ದಲ್ಲಿ ವರದಿಗಳನ್ನು ನೀಡದಿರುವ ಅಧಿಕಾರಿಗಳ ವಿವರಗಳು.

ಊ) ಅಧಿಕಾರಿಗಳನ್ನು ವಿದೇಶಗಳಿಗೆ ಕಳುಹಿಸುವಾದ ಅಥವಾ ನಿಯೋಜಿಸುವ ಪ್ರಶ್ನೆಯನ್ನು ಪರಿಷ್ಕರಿಸಲು ಯಾವುದಾದರೂ ಸಚಿವಸಂಪುಟದ ಉಪಸಮಿತಿ ಇದೆಯೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಐಎಎಸ್ - 29

ಐಪಿಎಸ್ - 1

ಒಟ್ಟು - 30

ಹೆಸರು ಮತ್ತು ಭೇಟಿ ನೀಡಿದ ದೇಶಗಳನ್ನು ಅನುಬಂಧ-1 ರಲ್ಲಿ ಕೊಡಲಾಗಿದೆ.

ಆ) ಯಾರೂ ಇಲ್ಲ.

ಇ) ಸುಮಾರು ರೂ. 12,75,906.00.

ಈ) ಎಲ್ಲಾ ಅಧಿಕಾರಿಗಳಿಂದ ವರದಿಗಳು ಇನ್ನೂ ಸ್ವೀಕೃತವಾಗಬೇಕಾಗಿದೆ.

ಉ) (ಈ) ನಲ್ಲಿ ನೀಡಿದ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಊ) ಇಲ್ಲ.

ಅನುಬಂಧ - 1

ವಿದೇಶ ಪ್ರವಾಸ ಮಾಡಿದ ಅಧಿಕಾರಿಗಳ ಹೆಸರು ಮತ್ತು ಭೇಟಿ ನೀಡಿದ ದೇಶಗಳು

ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರು ಶ್ರೀ:ಶ್ರೀಮತಿ	ಭೇಟಿ ನೀಡಿದ ದೇಶ
ಐ.ಎ.ಎಸ್		
1.	ರೇಣುಕಾ ವಿಶ್ವನಾಥನ್	ಸಿಂಗಪೂರ್
2.	ವಿ. ಗೋವಿಂದರಾಜ್	ಜರ್ಮನಿ (ಫ್ರಾಂಕಫರ್ಟ್)
3.	ಡಿ.ವಿ. ಪ್ರಸಾದ್	ಸೌದಿ ಅರೇಬಿಯಾ (ರಿಯಾದ್)
4.	ಬಿ.ಎಸ್. ಪಾಟೀಲ್	ಸ್ವಿಡ್ಜರಲ್ಯಾಂಡ್, ಇಸ್ರೇಲ್, ದುಬೈ.
5.	ಎಂ.ಸಿ. ಸತ್ಯವಾದಿ	ಸ್ವಿಡ್ಜರಲ್ಯಾಂಡ್, ಇಸ್ರೇಲ್, ದುಬೈ ಮತ್ತು ಸಿಂಗಪೂರ್.
6.	ಪಿ.ಎಸ್.ಎಸ್. ಥಾಮಸ್	ಯು.ಎಸ್.ಎ
7.	ಎನ್. ವಿಶ್ವನಾಥನ್	ಸಿಂಗಪೂರ್
8.	ಎಂ.ಕೆ. ಶಂಕರಲಿಂಗೇಗೌಡ	ಸಿಂಗಪೂರ್
9.	ಸಿದ್ದಯ್ಯ	ಸಿಂಗಪೂರ್
10.	ಮೀರಾ ಸಿ. ಸಕ್ಸೇನಾ	ಯುಎಸ್ಎ ಮತ್ತು ಕೆನಡಾ
11.	ಬಿ.ಹೆಚ್. ಅನಿಲ್ ಕುಮಾರ್	ಯುಎಸ್ಎ (ಸಾಲ್ಟಲೇಕ್ ಸಿಟಿ)
12.	ಗೌರವ್ ಗುಪ್ತ	ಜರ್ಮನಿ (ಬರ್ಲಿನ್)
13.	ರಜನೀಶ್ ಗೋಯಲ್	ದುಬೈ

14.	ಜಿ. ಮುನಿಯಪ್ಪ	ಜಪಾನ್ (ಟೋಕಿಯೋ)
15.	ಎಂ.ಬಿ. ಪ್ರಕಾಶ್	ದುಬೈ
16.	ಎಸ್.ಎಸ್. ಮೀನಾಕ್ಷಿ ಸುಂದರಂ	ದುಬೈ, ಸಿಂಗಪೂರ್
17.	ಅರವಿಂದ್ ಜಾದವ್	ಇಟಲಿ ಮತ್ತು ಜರ್ಮನಿ
18.	ಕೆ.ಪಿ. ಸಿಂಗ್	ಯುಎಸ್ಎ (ವಾಷಿಂಗಟನ್)
19.	ಡಾ: ಮಾಲತಿ ದಾಸ್	ಯು.ಕೆ.
20.	ಡಾ: ಎಸ್. ಸುಬ್ರಮಣ್ಯ	ಇಸ್ರೇಲ್
21.	ಐ.ಎಂ. ವಿಠಲ್ ಮೂರ್ತಿ	ಸ್ವಿಡ್ಜರಲ್ಯಾಂಡ್, ಜರ್ಮನಿ, ಫ್ರಾನ್ಸ ಮತ್ತು ಯು.ಕೆ.
22.	ಸಂಜಯ್ ಕಾಲ್	ಯುಎಸ್ಎ (ಬೋಸ್ಟನ್)
23.	ಎಸ್.ಎಂ. ಆಚಾರ್ಯ	ಸಿಂಗಪೂರ್
24.	ಎಸ್.ಬಿ. ಮುದ್ದಪ್ಪ	ಇಸ್ರೇಲ್
25.	ವಿ. ಉಮೇಶ್	ಇಸ್ರೇಲ್
26.	ಎನ್. ಗೋಕುಲ್ ರಾಂ	ಸಿಂಗಪೂರ್
27.	ಸಿ. ಗೋಪಾಲ ರೆಡ್ಡಿ	ಸಿಂಗಪೂರ್
28.	ಜೆ. ವಾಸುದೇವನ್	ಸಿಂಗಪೂರ್.
29.	ಡಾ: ಎ. ರವೀಂದ್ರ	ನೆದರಲ್ಯಾಂಡ್ಸ್

ಐ.ಪಿ.ಎಸ್

1.	ಎ.ಆರ್. ಇನಫ್ಯಾಂಟ್	ರಷ್ಯಾ ಮತ್ತು ಆಸ್ಟ್ರೇಲಿಯಾ

ಬೆಂಗಳೂರು ನಗರದಲ್ಲಿ ಪೆಟ್ರೋಲ್ ಮತ್ತು ಡೀಸಲ್ ಮೇಲೆ ಹಾಕಿರುವ ಸೆಸನಿಂದ ಬಂದ ಹಣ

2209 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಯಾವಾಗಿನಿಂದ ಸೆಸ್ ವಿಧಿಸಲಾಯಿತು?